ಆಂಗ್ಲೋ ಇಂಡಿಯನ್ ಪಂಗಡದ ಖಾಸಗೀ ಶಾಲೆಗಳ ಮಂಜೂರಾತಿ ನಿಯಮಂ

೧೦೦೩. ಶ್ರೀ ಡೆರಿಕ್ ಎಂ. ಬಿ. ಪುಲಿನ್‌ಫಾ (ನಾಮನಿರ್ದೇಶನ ಹೊಂದಿದವರು) ಮತ್ತು ಶ್ರೀ ಎ. ಕೆ. ಅನಂತಕೃಷ್ಣ (ಶಿವಾಜಿನಗರ).— ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆಂಗ್ಲೋ ಇಂಡಿಯನ್ ಪಂಗಡದವರು ನಡೆಸುತ್ತಿರುವ ಖಾಸಗಿ ಶಾಲೆ ಮಂಜೂರು ಮಾಡಲು ಇರುವ ನಿಯಮಗಳು,

ಆ) ರಾಜ್ಯದಲ್ಲಿರುವ ಆಂಗ್ಲೋ ಇಂಡಿಯನ್ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಷ್ಟು ಇರುವುವು ಜಿಲ್ಲಾವಾರು ವಿವರ ಕೊಡುವುದು.

ಇ) ಸರ್ಕಾರವು ಇಂತಹ ಶಾಲೆಗಳ ಮೇಲೆ ಇಟ್ಟಿರುವ ಹಿಡಿತ

ಈ) ಇಂತಹ ಶಾಲೆಯವರು ಹೆಚ್ಚಿನ ವಂತಿಕೆ ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಇಂತಹ ಹೆಚ್ಚಿನ ವಂತಿಕೆ ವಸೂಲು ಮಾಡುವುದನ್ನು ತಡೆಯಲು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ.ಎಚ್. ರಂಗನಾಥ್ (ಶಿಕ್ಷಣ ಸಚಿವರು).—

ಅ) ಪ್ರಾಥಮಿಕ ಶಿಕ್ಷಣ ಅನುದಾನ ಸಂಹಿತೆ ನಿಯಮ ೧೨ ಹಾಗೂ ಪ್ರೌಢ ಶಿಕ್ಷಣ ಸಂವಿಧಾನ ಸಂಹಿತೆ ನಿಯಮ ೯ ಮತ್ತು ೧೦.

	ಪ್ರಾಥಮಿಕ ಶಾಲೆ	ಪ್ರೌಢ ಶಾಲೆ
ಅ) ೧) ಆಂಗ್ಲೋ ಇಂಡಿಯನ್ ಕೋಮಿನವರು ನಡೆಸುತ್ತಿರುವ ಶಾಲೆಗಳು	೬	೪
೨) ಆಂಗ್ಲ ಮಾಧ್ಯಮ ಶಾಲೆಗಳು	೧೦೫೨	೩೪೭
	೧೦೫೮	೩೫೧

ಇ) (ಜಿಲ್ಲಾವಾರು ವಿವರ ಪಟ್ಟಿ ಲಗತ್ತಿಸಿದೆ)
೧) ವಾರ್ಷಿಕ ತಪಾಸಣೆಗಳು
೨) ಪರವಾನಿಗೆ ನವೀಕರಿಸುವುದು

ಈ) ಇಲ್ಲಾ

ಉ) ಉದ್ಭವಿಸುವುದಿಲ್ಲ

ಆಂಗ್ಲ ಮಾಧ್ಯಮ ಶಾಲೆಗಳು

		ಪ್ರಾಥಮಿಕ ಶಾಲೆಗಳು	ಪ್ರೌಢ ಶಾಲೆಗಳು
೧)	ಬೆಂಗಳೂರು, ಉತ್ತರ ಜಿಲ್ಲೆ	೨೩೦	೭೧
೨)	ಬೆಂಗಳೂರು ದಕ್ಷಿಣ ಜಿಲ್ಲೆ	೨೯೯	೬೮
೩)	ಬೆಂಗಳೂರು ಗ್ರಾಮಾಂತರ ಜಿಲ್ಲೆ	೧೮	೧೫
೪)	ಕೋಲಾರ	೨೦	೨೯
೫)	ತುಮಕೂರು	೩೧	೧೧
೬)	ಶಿವಮೊಗ್ಗ	೩೧	೨೯
೭)	ಚಿತ್ರದುರ್ಗ	೨೯	೦೪
೮)	ಮೈಸೂರು	೬೧	೨೫
೯)	ಮಂಡ್ಯ	೨೦	೧೧
೧೦)	ಹಾಸನ	೩೪	೦೨
೧೧)	ಚಿಕ್ಕಮಗಳೂರು	೧೮	೦೬
೧೨)	ದಕ್ಷಿಣ ಕನ್ನಡ, ಪಡಿಗಳೂರು	೫೫	೧೪
೧೩)	ಕೊಡಗು, ಮಡಿಕೇರಿ	೨೧	೦೬
೧೪)	ಬೆಳಗಾಂ	೨೦	೨೬
೧೫)	ಕಾರವಾರ (ಉತ್ತರ ಕನ್ನಡ)	೧೯	೧೮
೧೬)	ಧಾರವಾಡ	೪೧	೦೭
೧೭)	ಬಿಜಾಪುರ	೨೩	೦೯
೧೮)	ಬಳ್ಳಾರಿ	೨೯	೦೨
೧೯)	ಗುಲ್ಬರ್ಗಾ	೦೮	೦೨
೨೦)	ರಾಯಚೂರು	೧೭	೦೨
೨೧)	ಬೀದರ್	೧೪	೦೪
	ಒಟ್ಟು	೧೦೫೮	೩೫೧

SRI DERRICK M. B. FULLINFAW —The reply has not come.

MR. SPEAKER.—I will ask them to give the reply.

SRI DERRICK M. B. FULLINFAW.- That is not the reply to my question.

MR. SPEAKER.—I have sent the reply. What is that you received just now ?

SRI DERRICK M. B. FULLINFAW.—That is a reply to the previous question Sir.

MR. SPEAKER.—Now you receive the reply to your question.

SRI DERRICK M. B. FULLINFAW.—Will the Hon. Minister for Education be pleased to state the norms governing the sanction of Schools to be run for the Anglo-Indian Community ; the number of Anglo-Indian and English Medium Primary and Secondary Schools in the State (District-wise details be given): the kind of control exercised by Government on these Schools; Whether Govt. is aware that exhorbitant donations are being collected by these Schools and

the measures contemplated by the Government to curb heavy collection of donations by these Schools.

MR. SPEAKER.—You have crowded the Minister with too many supplementaries.

SRI DERRICK M. B. FULLINFAW.—But I am not happy with the replies given. I am really shocked to see that the Education Department is not aware of the donation which is going on in Bangalore city. It is one of the burning issues. I think the people of Andhra Pradesh, Kerala and Tamil Nadu are aware that in Bangalore huge and heavy donations are being taken for admission in various schools. Our respected Minister is saying that he is not aware of taking donations by the Schools in Bangalore city.

SRI K. H. RANGANATH.—The Government is not aware of the fact and not even a complaint has been received from the Hon'ble member.

MR. SPEAKER.—Have you written to the Government ? Why don't you write to the Minister.

SRI K. H. RANGANATH.—If the hon'ble member were to write to me stating which are the schools taking donations, I will be in a position to take action.

SRI DERRICK M. B. FULLINFAW.—Sir, it is a fact and therefore I am bringing it to the notice of the hon'ble Minister. I want to know what are the measures that he contemplates to put down this evil practice of donation.

SRI K. H. RANGANATH.—It is a hypothetical question.

MR. SPEAKER.—When you have not written to him, when you have complained, naturally it is hypothetical for the Minister.

ಶ್ರೀ ಹೆಚ್. ಏಕಾಂತಯ್ಯ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳಿಗಾಗಲೀ, ಸರ್ಕಾರಕ್ಕಾಗಲೀ ಪತ್ರಿಕೆಗಳಲ್ಲಿ ಮತ್ತು ಬೇರೆ ಬೇರೆ ರೀತಿಯಲ್ಲಿ ಗಮನಕ್ಕೆ ಬಂದಾಗ ಆದು ಸರ್ಕಾರದ ಗಮನಕ್ಕೆ ಬರುವುದಿಲ್ಲವೇ ? ಪೋಷಕರು ಮತ್ತು ಇತರರು ಹೇಳಿದಾಗ ಸರ್ಕಾರ ಅದನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲವೆ ?

ಶ್ರೀ ಕೆ. ಎಚ್. ರಂಗನಾಥ್.— ನಾವು ಗಮನಕ್ಕೆ ತೆಗೆದುಕೊಳ್ಳುತ್ತೇವೆ. ವಿಜಯಾ ಕಾಲೇಜಿನಲ್ಲಿ ಉಪಾಧ್ಯಾಯರೇ ಧರಣಿ ಮಾಡುತ್ತಿದ್ದಾರೆ ಎಂದು ಓದಿರಬಹುದು. ಆದರೆ ಆ ಶಾಲೆಯ ಬಗ್ಗೆ ನಿರ್ದಿಷ್ಟವಾದ ಆಪಾದನೆ ಸರ್ಕಾರಕ್ಕೆ ಬಂದರೆ ಮಾತ್ರ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ವಿನಹ ಸಂಪ್ರತಿ ಇದು ಆಗುತ್ತದೆ ಎಂದು ಹೇಳಿದರೆ ಏನು ಕ್ರಮ ತೆಗೆದುಕೊಳ್ಳುವುದು ತಾವಿದ್ದರೆ ಏನು ಮಾಡುತ್ತಿದ್ದಿರಿ ? ಕ್ರಮ ತೆಗೆದುಕೊಳ್ಳುತ್ತಿದ್ದರಾ ?

ಶ್ರೀ ಎಚ್. ಏಕಾಂತಯ್ಯ.— ನಾವು ಕ್ಯಾಪಿಟೇಷನ್ ಫೀ ಬಗ್ಗೆ ಬಂದು ನಿರ್ಧಾರ ತೆಗೆದು ಕೊಂಡಿದ್ದೇವೆ. ಆವರೂ ಕೂಡ ಆ ನೀತಿಪರರಾಗಿದ್ದಾರೆಯೇ ?

ಶ್ರೀ ಕೆ.ಎಚ್. ರಂಗನಾಥ್.— ನೀತಿವಂತರ ಪ್ರಶ್ನೆಯಲ್ಲ.

ಶ್ರೀ ಎಚ್. ಏಕಾಂತಯ್ಯ.—ನೀತಿವಂತರು ಎಂದು ಹೇಳಲಿಲ್ಲ. ನೀತಿಪರ ಎಂದು ಹೇಳಿದ್ದುದು.

ಶ್ರೀ ಕೆ. ಎಚ್. ರಂಗನಾಥ್.— ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾದರೆ ನಿರ್ದಿಷ್ಟವಾದ ಆಪಾದನೆ ಇಂಥವರ ಬಗ್ಗೆ ಎಂದು ಇರಬೇಕಾಗುತ್ತದೆ. ಈ ಪಿಡುಗನ್ನು...

ಶ್ರೀ ಎಚ್. ವಿಶ್ವಾಂತಯ್ಯ.— ಈ ವಿಷಯವು ತಮ್ಮ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದಕ್ಕೆ ಹೇಳಿದೆ. ನಿರ್ದಿಷ್ಟವಾದ ಪ್ರಕರಣವನ್ನು ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದೂ ಹೇಳಿದರೆ ಆ ಪ್ರಶ್ನೆ ಬೇರೆ. ಆದರೆ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂಬುದನ್ನು ನಾವು ಒಪ್ಪುವುದಿಲ್ಲ.

ಶ್ರೀ ಕೆ.ಎಚ್. ರಂಗನಾಥ್.—ನಿರ್ದಿಷ್ಟವಾದ ಆಪಾದನೆ ಬಂದರೆ ಕ್ರಮ ತೆಗೆದುಕೊಳ್ಳುತ್ತೇವೆ. ಕಾನೂನಿನ ಕೆಳಗೆ, ಕಾನೂನಿನ ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕಾನೂನು ವಿರೂದ್ಧ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೆ ನಾನು ಹಿಂದೆ ಪ್ರಸ್ತಾಪ ಮಾಡಿ ಎಜುಕೇಷನ್ ಬಿಲ್ ಬಂದಾಗ ಅನುಕೂಲವಾಗುತ್ತದೆ ಎಂದು ಹೇಳಿದ್ದೆ. ಮತ್ತೆ ಬೇರೆ ಏನು ಮಾಡಬೇಕು ಎಂಬ ಬಗ್ಗೆ ಇಲಾಖೆ ಯೋಚಿಸುತ್ತಿದೆ. ಇದು ಏನು ವ್ಯಾಪಕವಾಗಿ ಹರಡಿದ ಇದನ್ನು ಯಾವ ರೀತಿ ನಿಲ್ಲಿಸಬೇಕು, ತೆಗೆದುಹಾಕಬೇಕು ಎಂಬ ಬಗ್ಗೆ ಯೋಚನೆ ಮಾಡುತ್ತಿದ್ದೇವೆ.

ಕೊಪ್ಪಳದ ಬಾಲಕರ ಸರ್ಕಾರದ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಿಗೆ ಅಂಗ ಸಂಸ್ಥೆಗಳ ಜವಾಬ್ದಾರಿ

ಶ್ರೀ. ಎಂ. ಬಿ. ದಿವಟರ್ (ಕೊಪ್ಪಳ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೮) ಕೊಪ್ಪಳದ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಿಗೆ ಎಷ್ಟು ಅಂಗ ಸಂಸ್ಥೆಗಳ ಆಡಳಿತ ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸಲಾಗಿದೆ ?

ಆ) ಒಬ್ಬ ವ್ಯಕ್ತಿಯು ಅನೇಕ ಅಂಗ ಸಂಸ್ಥೆಗಳ ಆಡಳಿತವನ್ನು ನೋಡಿಕೊಳ್ಳುವುದು ಸಾಧ್ಯವೇ?

ಇ) ಹಾಗಿಲ್ಲದಿದ್ದಲ್ಲಿ ಪ್ರತಿಯೊಂದು ಅಂಗ ಸಂಸ್ಥೆಗೆ ಪ್ರತ್ಯೇಕವಾಗಿ ಅಧಿಕಾರಿಯನ್ನು ನೇಮಿಸಲು ಕ್ರಮಕೈಗೊಳ್ಳಲಾಗುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ಕೊಪ್ಪಳ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಿಗೆ ಈ ಕೆಳಕಂಡ ಸಂಸ್ಥೆಗಳ ಆಡಳಿತ ವಹಿಸಲಾಗಿದೆ.

೧. ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಸಂಬಂಧಿಸಿದ ಕಾಲೇಜು ವಿಭಾಗ, ಪ್ರೌಢ ಶಾಲಾ ವಿಭಾಗ ಮತ್ತು ವೃತ್ತಿ ಶಿಕ್ಷಣ ವಿಭಾಗ.

೨. ಅದೇ ಕಟ್ಟಡದಲ್ಲಿ ನಡೆಯುತ್ತಿರುವ ಶಿಕ್ಷಕರ ತರಬೇತಿ ಸಂಸ್ಥೆಗಳು ಮತ್ತು

೩. ಪ್ರೀ ವೊಕೇಷನಲ್ ಸೆಂಟರ್.

ಆ) ಒಂದೇ ವ್ಯಕ್ತಿಯು ಹಲವು ಸಂಸ್ಥೆಗಳ ಮೇಲ್ವಿಚಾರಣೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವುದು ಕಷ್ಟ ಸಾಧ್ಯ.

ಇ) ಹೌದು. ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಬಿ. ದಿವಟರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಿನ್ಸಿಪಾಲರಿಗೆ ಕಾಲೇಜು ವಿಭಾಗ, ಪ್ರೌಢಶಾಲಾ ವಿಭಾಗ ಮತ್ತು ವೃತ್ತಿ ಶಿಕ್ಷಣ ವಿಭಾಗ ಅಲ್ಲದೆ ಶಿಕ್ಷಕರ ತರಬೇತಿ ಸಂಸ್ಥೆಗಳು ಮತ್ತು ಪ್ರೀ ವೊಕೇಷನಲ್ ಸೆಂಟರ್ ಇಷ್ಟರ ಆಡಳಿತವನ್ನು ವಹಿಸಲಾಗಿದೆ ಎಂದು ಹೇಳಿದ್ದಾರೆ. ಇಷ್ಟೊಂದು ವಿಭಾಗಗಳ ಆಡಳಿತವನ್ನು ಒಬ್ಬ ಪ್ರಿನ್ಸಿಪಾಲರು ನೋಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಶಿಕ್ಷಕರ ತರಬೇತಿ ಕೇಂದ್ರಕ್ಕೆ ಬೇರೆ ವ್ಯವಸ್ಥೆ ಮಾಡಿ ಎಂದೂ ಪ್ರತಿ ವರ್ಷ ಸರ್ಕಾರಕ್ಕೆ ಮಾನವಿ ಕಳುಹಿಸುತ್ತಿದ್ದೇವೆ. ಸರ್ಕಾರದವರು ಎಕಾನಮಿ ಮೆಷರ್ ಇದೆ ಎಂದು ನಮ್ಮ ಮಾನವಿಯನ್ನು ಪ್ರತಿ ವರ್ಷ ರಿಜೆಕ್ಟ್ ಮಾಡುತ್ತಿದ್ದಾರೆ. ಆದ್ದರಿಂದ ಶಿಕ್ಷಕರ ತರಬೇತಿ ಕೇಂದ್ರಕ್ಕೆ, ಅದನ್ನು ಬೇರೆ ಮಾಡಿ ವ್ಯವಸ್ಥೆ ಮಾಡುತ್ತೀರಾ ? ಅದಕ್ಕೆ ಹೆಚ್ಚಿನ ಖರ್ಚು ಬರುವುದಿಲ್ಲ. ಬರೀ ಸೂಪರಿಂಟೆಂಡೆಂಟ್ ಒದಗಿಸಿದರೆ ಸಾಕು, ಬೇರೆ ಸ್ಟಾಫ್ ಇದೆ. ದಯವಿಟ್ಟು ಈ ವರ್ಷ ಬೈಫರ್‌ಕೇಷನ್ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಇಷ್ಟರಲ್ಲೇ ಅದನ್ನು ಮಾಡೋಣ.

ಅಧ್ಯಕ್ಷರು.—ಜಯಚಂದ್ರ ಅವರೆ, ನಿಮ್ಮ ಪ್ರಶ್ನೆಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ.